**ದಿನಾಂಕಃ 19.09.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಾದ ಶ್ರೀ.ARS ರವರಿಂದಃ**

1) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನು ಒಂದು ದ್ವಿಚಕ್ರ ವಾಹನದಲ್ಲಿ ಒಬ್ಬರೇ ಹೋಗುತ್ತಿದ್ದರು. ದೊಡ್ಡಬಳ್ಳಾಪುರಕ್ಕೆ ಹೋಗುವ ಮುಖ್ಯರಸ್ತೆಯಲ್ಲಿ ಇರುವಂತಹ ಇಸ್ಲಾಂಪುರ ಸ್ಥಳದ ಸಮೀಪದಲ್ಲಿ ಅಪಘಾತವು ಆಗಿದೆ.

2) ಅಪಘಾತದ ಸಂಬಂಧವಾಗಿ ನಮ್ಮ ಊರಿನವರಾದಂತಹ ಓರ್ವ ಶ್ರೀನಿವಾಸ ಎಂಬುವವರು ಪೋಲಿಸರಿಗೆ ದೂರನ್ನು ಕೊಟ್ಟಿದ್ದಾರೆ.

3) ಮೇಲೆ ಹೇಳಿದಂತಹ ಅಪಘಾತವು ಯಾವ ರೀತಿ ಆಗಿದೆ ಎಂದು ನನಗೆ ತಿಳಿದಿಲ್ಲ. ನನಗೆ ಯಾವುದೇ ಸಂತಾನ ಇರುವುದಿಲ್ಲ. ಯಾವ ದ್ವಿಚಕ್ರ ವಾಹನವು ಅಪಘಾತವನ್ನು ಮಾಡಿದೆ ಎಂದರೆ ಬೇರೊಂದು ದ್ವಿಚಕ್ರ ವಾಹನವು ಅಪಘಾತವನ್ನು ಮಾಡಿದೆ ಎಂದು ನನಗೆ ತಿಳಿದು ಬಂದಿದೆ.

4) ನನ್ನ ಗಂಡನು ಆಸ್ಪತ್ರೆಯಲ್ಲಿ ಇದ್ದಾಗ ಮರಣ ಹೊಂದಿದ್ದಾರೆ.

5) ನನ್ನ ಗಂಡನ ಮೃತ ದೇಹವನ್ನು ನಾನು ಪ್ರಥಮ ಬಾರಿಗೆ ನೆಲಮಂಗಲದ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿದೆನು.

6) ಅಪಘಾತದ ಸಮಯದಲ್ಲಿ ತಾವು ಹೋಗುತ್ತಿದ್ದಂತಹ ದ್ವಿಚಕ್ರ ವಾಹನವನ್ನು ನನ್ನ ಗಂಡನೇ ಚಾಲನೆ ಮಾಡುತ್ತಿದ್ದರು ಎಂದು ನನಗೆ ತಿಳಿದು ಬಂದಿದೆ. ಈ ಸಂಬಂಧವಾಗಿ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಅಪಘಾತದ ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

7) ಅಪಘಾತವು ನನ್ನ ಗಂಡನ ತಪ್ಪಿನಿಂದಲೇ ಆಗಿದೆ ಎಂದರೆ ಸುಳ್ಳು.

8) **1** ನೇ ಎದುರುದಾರರಿಗೆ ಸೇರಿದಂತಹ ದ್ವಿಚಕ್ರ ವಾಹನಕ್ಕೆ ಸಮರ್ಪಕವಾದಂತಹ ವಿಮಾ ಪಾಲಿಸಿ ಇದೆ ಎಂಬ ಕಾರಣದಿಂದ **1** ನೇ ಎದುರುದಾರರಿಗೆ ಸೇರಿದ ದ್ವಿಚಕ್ರ ವಾಹನವು ಅಪಘಾತವನ್ನು ಮಾಡಿದೆ ಎಂದು ಸುಳ್ಳು ಮಾಹಿತಿಯನ್ನು ಕೊಟ್ಟು ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಎಂದರೆ ಸುಳ್ಳು.

9) ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ **37** ವರ್ಷ ವಯಸ್ಸು ಆಗಿತ್ತು. ನನ್ನ ಗಂಡನ ಆಧಾರ್ ಕಾರ್ಡ್ ದಾಖಲೆಯನ್ನು ಹಾಜರುಪಡಿಸಿದ್ದೇನೆ.

ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ **40** ವರ್ಷಗಳಿಗಿಂತ ಹೆಚ್ಚಿನ ವಯಸ್ಸು ಆಗಿತ್ತು ಮತ್ತು ಹೆಚ್ಚಿನ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ಈ ಬಗ್ಗೆ ಸಹಾ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

10) ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಗಂಡನ ತಾಯಿ ಮತ್ತು ನನ್ನ ಗಂಡನ ಅಣ್ಣ ಮತ್ತು ಅವರ ಹೆಂಡತಿ ಮತ್ತು ಅವರ ಇಬ್ಬರು ಮಕ್ಕಳು ಎಲ್ಲರೂ ವಾಸವಿದ್ದೇವೆ.

11) ನನ್ನ ಗಂಡನ ಅಣ್ಣನು ಉದ್ಯೋಗದಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಗಂಡನ ಅಣ್ಣನು ನನ್ನ ಗಂಡನ ಆದಾಯದ ಮೇಲೆ ಅವಲಂಭಿತರು ಆಗಿರಲಿಲ್ಲ ಎಂದರೆ ಸರಿ. ಅಪಘಾತಕ್ಕಿಂತ ಮೊದಲೇ ನನ್ನ ಗಂಡನ ತಾಯಿಯನ್ನು ನನ್ನ ಗಂಡನ ಅಣ್ಣನು ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು.

12) ನನ್ನ ಗಂಡನು ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಮತ್ತು ಆ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. **Alco Bev** ಎಂಬ ಕಂಪೆನಿಯಲ್ಲಿ ನನ್ನ ಗಂಡನು ಚಾಲಕನಾಗಿ ಉದ್ಯೋಗ ಮಾಡುತ್ತಿದ್ದರು. ನನ್ನ ಗಂಡನ ಉದ್ಯೋಗಕ್ಕೆ ಸಂಬಂಧಪಟ್ಟ ಹಾಗೆ ಸಂಬಳದ ಚೀಟಿಯನ್ನು ಹಾಜರುಪಡಿಸಿದ್ದೇನೆ. **Alco Bev** ಸಂಸ್ಥೆಯ ಅಧಿಕಾರಿಗಳನ್ನು ಈ

ನ್ಯಾಯಾಲಯದ ಮುಂದೆ ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

13) ನನ್ನ ಗಂಡನಿಗೆ ಒಂದು ತಿಂಗಳಿಗೆ **27** ಸಾವಿರ ರೂಪಾಯಿ ಸಂಬಳ ಬರುತ್ತಿತ್ತು ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

14) ನನ್ನ ಗಂಡನು ಚಾಲಕ ವೃತ್ತಿಯ ಜೊತೆಗೆ ವ್ಯವಸಾಯವನ್ನೂ ಸಹಾ ಮಾಡುತ್ತಿದ್ದರು ಎನ್ನುವ ಬಗ್ಗೆ ಪೂರಕವಾದ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಗಂಡನು ಯಾವುದೇ ಸಂಸ್ಥೆಯಲ್ಲಿಯೂ ಚಾಲಕನಾಗಿ ಕೆಲಸ ಮಾಡುತ್ತಿರಲಿಲ್ಲ ಮತ್ತು ವ್ಯವಸಾಯವನ್ನೂ ಸಹಾ ಮಾಡುತ್ತಿರಲಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

15) ನಾನು ನೌಕರಿ ಮಾಡುತ್ತಿದ್ದೇನೆ ಎಂದರೆ ಸುಳ್ಳು.

16) ನನ್ನ ಗಂಡನ ಅಂತ್ಯಸಂಸ್ಕಾರ ಮತ್ತು ವೈಕುಂಠ ಸಮಾರಾಧನೆ ಇತ್ಯಾದಿಗಳಿಗೆ **2** ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎನ್ನುವ ಸಂಬಂಧ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

17) ಯಶಸ್ ಎಂಬ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನದಲ್ಲಿ ಯಶಸ್ ಎಂಬ ಹುಡುಗನು ಹಿಂಬದಿಯ ಸವಾರ ಆಗಿದ್ದನು ಎಂದರೆ ಸುಳ್ಳು. ಯಾವ ರಸ್ತೆಯಲ್ಲಿ ಅಪಘಾತವು ಆಗಿದೆಯೋ ಸದರಿ ರಸ್ತೆಯು ಯಾವಾಗಲೂ ವಾಹನ ದಟ್ಟಣೆಯಿಂದ ಕೂಡಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಯಾವುದೇ ವಾಹನವೂ ಅತ್ಯಂತ ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸುಳ್ಳು. ಈ ಅಪಘಾತದ ಸಂಬಂಧವಾಗಿ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಸುಳ್ಳು ಸಂಗತಿಗಳನ್ನು ಬರೆಸಿದ್ದೇನೆ ಮತ್ತು ಕೇವಲ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ</u>**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.